ಧರ್ಮದಿಂದ ಪ್ರೇರಿತವಾದ, ಪೂರ್ವನಿರ್ಧಾರಿತ ಉದ್ದೇಶಗಳಿಂದಾಗಿ ನಮ್ಮ ಚಿತ್ರಕಲೆ ಸೊರಗಿದೆ. ನಮ್ಮ ಪರಂಪರೆಯೊಳಗೆ ನಡೆದ ಪ್ರಯೋಗಗಳು ಕಥೆಗಳನ್ನು ಅವಲಂಬಿಸಿವೆ. ಪ್ರೇಕ್ಷಕರು ಕೂಡ ಇವುಗಳನ್ನು ಸ್ವತಂತ್ರವಾಗಿ ಅರ್ಥಮಾಡಿಕೊಳ್ಳುವ ಅವಕಾಶಗಳು ಇರಲಿಲ್ಲ. ಕಥೆಗಳ ಟಿಪ್ಪಣಿ, ವಿವರ, ಹಿನ್ನೆಲೆ ಎಲ್ಲವುಗಳನ್ನು ಬರೆದಿಡಲಾಗಿತ್ತು. ಇವುಗಳ ಪರಿಧಿಯೊಳಗೆ ಅರ್ಥಮಾಡಿಕೊಳ್ಳುವಂತೆ ಒತ್ತಾಯಿಸಲಾಗುತ್ತಿತ್ತು. ಭಾರತದಲ್ಲಿ ಚಿತ್ರಕಲೆಯ ಪರಂಪರೆ, ಪ್ರಯೋಗ ಮತ್ತು ಹೊಸತನವನ್ನು ಈ ಹಿನ್ನೆಲೆಯಲ್ಲಿಯೇ ಅರಿಯಬೇಕಾಗಿದೆ.

◆ **ಆದಿವಾಸಿ ಚಿತ್ರಕಲೆ, ಜನಪದ ಚಿತ್ರಕಲೆ ಮತ್ತು ಆಧುನಿಕ ಚಿತ್ರಕಲೆಗೂ ನಿಮ್ಮ ಮೇಲಿನ ಮಾತು ಅನ್ವಯಿಸುತ್ತದೆಯೇ?**

ಇಲ್ಲ, ಇಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಆದಿವಾಸಿ ಮತ್ತು ಜನಪದ ಚಿತ್ರಕಲೆ ಪರಂಪರೆಯೊಂದಿಗೆ ಗಾಢವಾದ ನಂಟನ್ನು ಹೊಂದಿದೆ. ಆದರೆ ಆಧುನಿಕ ಚಿತ್ರಕಲೆ ಪರಂಪರೆಯಿಂದ ಬಿಡಿಸಿಕೊಳ್ಳಲು ಸಂಘರ್ಷ ಹೂಡುತ್ತದೆ. ಅಲ್ಲದೆ, ವೈಯಕ್ತಿಕ ಅನನ್ಯತೆಯನ್ನು ಗಳಿಸಿಕೊಳ್ಳಲು ಯತ್ನಿಸುತ್ತದೆ. ಈ ಅನನ್ಯತೆಯ ಕಾರಣದಿಂದಾಗಿ ಅದೊಂದು 'ಯಶಸ್ವಿ', 'ಮಹತ್ವಪೂರ್ಣ' ಪ್ರಯೋಗ ಅನ್ನಿಸಿಕೊಳ್ಳುವುದು. ಪ್ರಾಚೀನ ಕಾಲದಲ್ಲಿ ಚಿತ್ರಕಲೆ, ಮೂರ್ತಿಕಲೆ ಎನ್ನುವುದು ಒಂದು ಸಾಮೂಹಿಕ ಕಲೆಯಾಗಿತ್ತು. ಈ ಸಾಮೂಹಿಕತೆಯನ್ನು ನಾವು ಅನೇಕ ಹಳ್ಳಿ ಮತ್ತು ನಗರಗಳಲ್ಲಿ ನೋಡುತ್ತೇವೆ. ಕಾಲ ಸರಿದಂತೆ ಮುಖ್ಯವಾಗಿ ಮೂರು ಬದಲಾವಣೆಗಳು ಉಂಟಾದವು. ಒಂದು: ಕಲಾಕೃತಿಗಳು ಆಕಾರದಲ್ಲಿ ಚಿಕ್ಕದಾದವು. ಅಂದರೆ ಗೋಡೆಯ ವಿಶಾಲ ಚಿತ್ರಗಳಿಂದ ಕ್ಯಾನ್‌ವಾಸಿನ ಚಿತ್ರಗಳಿಗೆ ಇಳಿದವು. ಎರಡು: ಕಥಾ ಚಿತ್ರಗಳಿಂದ, ಅರಮನೆಗಳಿಂದ ಚಿತ್ರಕಲೆ ಸ್ವತಂತ್ರವಾಯಿತು. ಮೂರು: ಸಾಮೂಹಿಕವಾದ ಚಿತ್ರಕಲೆ ವ್ಯಕ್ತಿಗತ ಚಟುವಟಿಕೆಯಾಯಿತು. ಇದು ಭಾರತದ ಚಿತ್ರಕಲಾ ಪರಂಪರೆಯನ್ನು ದೊಡ್ಡ ಪ್ರಮಾಣದಲ್ಲಿ ಪ್ರಭಾವಿಸಿತು. ನಮ್ಮ ಪರಂಪರೆಯಲ್ಲಿ ಚಿತ್ರಕಾರನ ಸ್ವತಂತ್ರ ಅಸ್ತಿತ್ವವನ್ನು ಒಪ್ಪಿಕೊಂಡದ್ದು ಮಹತ್ವದ ಸಂಗತಿ. ಪ್ರತಿಯೊಬ್ಬ ಕಲಾವಿದ ಕೂಡ ವಿಭಿನ್ನತೆ ಕಾಯ್ದುಕೊಳ್ಳುವುದನ್ನು ಪ್ರಯೋಗಶೀಲತೆ ಎಂದು ಗುರುತಿಸಲಾಗುತ್ತದೆ. ಉಳಿದವರಿಗಿಂತ ಅವರ ಕಲಾಕೃತಿಗಳು ಎಷ್ಟು ವಿಭಿನ್ನವಾಗಿವೆ ಎಂಬುದೇ ಪ್ರಯೋಗಶೀಲತೆ. ಆದರೆ ಆದಿವಾಸಿ ಮತ್ತು ಜನಪದ ಚಿತ್ರಕಲೆಯಲ್ಲಿ ವ್ಯಕ್ತಿಗತ ಗುರುತಿಸಿಕೊಳ್ಳುವಿಕೆಗೆ ಅಷ್ಟು ಮಹತ್ವವಿರುವುದಿಲ್ಲ. ಇವು ಸಾಮಾನ್ಯವಾಗಿ ತಮ್ಮ ಪ್ರದೇಶದ ಸಾಮಾಜಿಕ, ಧಾರ್ಮಿಕ ಆಚರಣೆಗಳ ಜೊತೆ ಸಂಬಂಧ ಹೊಂದಿರುತ್ತವೆ. ಜೊತೆಗೆ ತಮ್ಮ ಪರಂಪರೆ ಮುಂದುವರೆಸುವುದರಲ್ಲೇ ಅವುಗಳ ಮಹತ್ವ ಅಡಗಿದೆ. ವರ್ಲಿ, ಮಧುಬನಿ ಮತ್ತು ಗೊಂಡ್ ಚಿತ್ರಕಲೆಗಳು ತಮ್ಮ ಪರಂಪರಾಗತ ಶೈಲಿಗಳಿಂದಲೇ ಗುರುತಿಸಿಕೊಂಡಿವೆ. ಆಧುನಿಕ ಚಿತ್ರಕಲೆ ಬೇರೆ ತೆರನಾದದ್ದು. ಸದಾ ಹೊಸ ಶೈಲಿ, ಹೊಸ ವಸ್ತುವಿನ ಹುಡುಕಾಟದಲ್ಲಿ ಇರುವಂಥದ್ದು. ಮೊದಲಿಗೆ ಕೆಲ ಸಮಸ್ಯೆಗಳು ಇದ್ದವು. ಅನೇಕ ಹೊಸ ಪ್ರಯೋಗಗಳು ನಿರುದ್ದಿಶ್ಯವಾಗಿದ್ದವು. ಜೊತೆಗೆ ಯುರೋಪಿನ ಕಲೆಯ ಕೆಟ್ಟ ಅನುಕರಣೆಗಳಾಗಿದ್ದವು. ಅಮೂರ್ತ ಚಿತ್ರಕಲೆಯ ಹೆಸರಿನಲ್ಲೂ ಕೆಲ ಕೆಟ್ಟ ಪ್ರಯೋಗಗಳು ನಡೆದವು. ಈ ಅಮೂರ್ತತೆ ವಿವರಿಸಲು ಮಧ್ಯವರ್ತಿಗಳ ದೊಡ್ಡ ಗುಂಪು ಹುಟ್ಟಿಕೊಂಡಿತು. ಭಾರತದ ನಗರಗಳಲ್ಲಿ ವಾಸಿಸುವ ಕೆಲ ಶ್ರೀಮಂತವರ್ಗ ಇಂಥ ಅಮೂರ್ತ ಕಲೆಯನ್ನು ಪೋಷಿಸಿತು. ಎಲ್ಲಾ ಪರಂಪರೆಗಳಲ್ಲೂ ಈ ಏರಿಳಿತಗಳು ಇದ್ದೇ ಇರುತ್ತವೆ. ಆದರೆ ಯಾವುದು ಮುಖ್ಯ, ಯಾವುದು ಅಲ್ಲ ಎಂಬುದನ್ನು ಅರಿಯಬೇಕು.

◆ **ನೀವು ಚಿತ್ರಕಲಾಕೃತಿಗಳನ್ನು ಸೃಷ್ಟಿಸಿದ್ದೀರಿ ಮತ್ತು ಕಲಾವಿಮರ್ಶೆಯನ್ನೂ ಮಾಡಿದ್ದೀರಿ. ಇವೆರಡೂ ಬೇರೆ ಬೇರೆ. ಚಿತ್ರಕಲಾಕೃತಿ ಸೃಷ್ಟಿಸುವಾಗ ನಿಮ್ಮ ಮನಸ್ಸು ಏನನ್ನು ಒಳಗೊಳ್ಳುತ್ತಿರುತ್ತದೆ? ಹಾಗೆಯೇ ಕಾವ್ಯ, ಕಾದಂಬರಿ ಕಲಾವಿಮರ್ಶೆಯಲ್ಲಿ ತೊಡಗಿಕೊಂಡಾಗ ಮನಸ್ಸಿನ ಚಲನೆ ಹೇಗಿರುತ್ತದೆ?**

ನಿಜ, ಇವೆರಡೂ ಸಂಪೂರ್ಣ ಬೇರೆ ಪ್ರಕಾರಗಳು. ಎರಡರಿಂದಲೂ ನಾನು ಆಕರ್ಷಿತನಾಗಿರುವೆ. ಕ್ಯಾನ್‌ವಾಸ್ ಮತ್ತು ಕಾಗದದ ಪುಟ ನೋಡಿದಾಗ ಕೊಂಚ ಸಮ್ಮೋಹನಕ್ಕೊಳಗಾಗುವೆ. ನಾನು ಕಥೆಗಾರ ಕೂಡ ಆಗಿರುವುದರಿಂದ ಚಿತ್ರಕಲೆಯೆಂದರೆ ಕಥೆ ಹೇಳುವ ಸಂಗತಿಯಲ್ಲ ಎನ್ನುವುದು ನನಗೆ ಗೊತ್ತಿದೆ.